# ಕರ್ನಾಟಕ ಸರ್ಕಾರ
## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.
## ಸಿ.ಸಿ.ನಂ.68/2019

ಪಿ.ಡಬ್ಲ್ಯೂಃ 1

ಸಿ.ಡಬ್ಲ್ಯೂಃ 1

ಸಾಕ್ಷಿದಾರರ ಹೆಸರು ಃ ಸಿದ್ದಪ್ಪ

ತಂದೆಯ ಹೆಸರುಃ ಃಗುಡ್ಡಪ್ಪ

ವಯಸ್ಸು ಃ 65 **ವರ್ಷ**

ಉದ್ಯೋಗ ಃ ವ್ಯವಸಾಯ

ವಾಸಸ್ಥಳ ಃ ಕೆಂಚಾಪುರ ಗೇಟ್

**ದಿನಾಂಕ: 08-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

2, 3, 4 ಮತ್ತು 5 ನೇ ಆರೋಪಿತರು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಆರೋಪಿತರ ಪರ ವಕೀಲರು ಆರೋಪಿತರ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ದಿನಾಂಕಃ 13-10-2017 ರಂದು ಕೆಂಚಾಪುರ ಗೇಟ್ ಲ್ಲಿ ನಮ್ಮ ಮನೆಯ ಪಕ್ಕದಲ್ಲಿರುವ ಕಣದಲ್ಲಿ 5 ರಿಂದ 6 ಕ್ವಿಂಟಾಲ್ ಅಡಿಕೆಯನ್ನು ಒಣಹಾಕಿ ಅದರ ಮೇಲೆ ಟಾರ್ಪಲ್ ನ್ನು ಮುಚ್ಚಿದ್ದು, ರಾತ್ರಿ ಸಮಯದಲ್ಲಿ ಮುಚ್ಚಿದ್ದ ಟಾರ್ಪಲ್ ಹರಿದು, 5 ರಿಂದ 6 ಕ್ವಿಂಟಾಲ್ ಅಡಿಕೆಯನ್ನು ಯಾರೋ ಕಳ್ಳತನ ಮಾಡಿರುತ್ತಾರೆ. ಅದರ ಅಂದಾಜು ಬೆಲೆ ಸುಮಾರು 3 ಲಕ್ಷ ಇರುತ್ತದೆ. ಬೆಳಿಗ್ಗೆ ಕಳ್ಳತನವಾಗಿರುವ ಬಗ್ಗೆ ಕಂಡುಬಂದಿದ್ದು, ನಂತರ ನಾವು ಲಿಂಗದಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದೆವು. ನಾನು ದೂರು ನೀಡಿದ ಮರುದಿನ ಪೊಲೀಸರು ಬಂದು ನಮ್ಮ ಮನೆಯ ಪಕ್ಕದಲ್ಲಿದ್ದ ಕಣದಲ್ಲಿ ಕಳ್ಳತನವಾಗಿರುವ ಬಗ್ಗೆ ಮಹಜರ್ ಕ್ರಮವನ್ನು ಜರುಗಿಸಿದರು. ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ರಂಗಪ್ಪ ಮತ್ತು ಲಕ್ಷ್ಮಣ ಹಾಜರಿದ್ದರು. ನಂತರ ಪೊಲೀಸರು ಒಂದು ವರ್ಷದ ನಂತರ ನನಗೆ ಕರೆ ಮಾಡಿ ಕಳ್ಳತನ ಮಾಡಿದ ವ್ಯಕ್ತಿಗಳನ್ನು ಹಿಡಿದಿರುವ ಬಗ್ಗೆ ತಿಳಿಸಿದ್ದು, ನನ್ನನ್ನು ಠಾಣೆಗೆ ಬರಲು ತಿಳಿರುತ್ತಾರೆ. ಆಗ ನಾನು ಠಾಣೆಗೆ ಹೋಗಿ ನೋಡಿದ್ದು, ನ್ಯಾಯಾಲಯದ ಮುಂದಿರುವ ಆರೋಪಿತರೇ ಕಳ್ಳತನ ಮಾಡಿರುವ ಬಗ್ಗೆ ನನಗೆ ಪೊಲೀಸರಿಂದ ತಿಳಿದುಬಂದಿರುತ್ತದೆ. ನಂತರ 2-3 ಕ್ವಿಂಟಾಲ್ ಅಡಿಕೆಯನ್ನು ಲಕ್ಕವಳ್ಳಿ ಪೊಲೀಸರು ಆರೋಪಿಯಿಂದ ಪಡೆದುಕೊಂಡಿದ್ದು, ಅದನ್ನು ನನಗೆ ವಾಪಾಸ್ಸು ನೀಡಿರುತ್ತಾರೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ದೂರಾಗಿದ್ದು, ಸದರಿ ದಾಖಲೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ಛಾಯಚಿತ್ರವನ್ನು ತೋರಿಸಲಾಗಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿ ಸಾಕ್ಷಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಒಂದು ಹಳದಿ ಬಣ್ಣದ ಟಾರ್ಪಲ್ ನ್ನು ನೋಡಿ ಗುರುತಿಸಿದ್ದು, ಅದನ್ನು ಎಂ ಒ -1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ** ಶ್ರೀ ಎಎ **ವಕೀಲರಿಂದ.**

ದಿಃ 13-10-2017 ರಂದು ಕಳ್ಳತನವಾಗಿರುತ್ತದೆ. ಕಳ್ಳತನವಾದ ಮರುದಿನ ಅಂದರೆ ದಿಃ 14-10-2017 ರಂದು ನಾನು ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ಕಳ್ಳತನವಾದ ಅಡಿಕೆಯು ನಿಮಗೆ ಸಂಬಂಧಪಟ್ಟ ಅಡಿಕೆ ಎಂದು ತೋರಿಸಲು ಯಾವುದಾದರೂ ದಾಖಲಾತಿಯನ್ನು ಪೊಲೀಸರಿಗೆ ನೀಡಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನಿಮ್ಮ ಅಡಿಕೆ ತೋಟದಲ್ಲಿ ಅಡಿಕೆಯನ್ನು ಬೆಳೆದ ವಿಚಾರವಾಗಿ ಪಹಣಿಯನ್ನು ಪೊಲೀಸರಿಗೆ ನೀಡಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಅಡಿಕೆಯು ಕಳುವಾದ ಜಾಗವು ಕಣ, ಮನೆಯ ಪಕ್ಕದಲ್ಲಿರುವ ಕಣವಾಗಿದ್ದು, ಅದಕ್ಕೆ ಸಂಬಂಧಪಟ್ಟ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದೂರನ್ನು ರಂಗಪ್ಪನವರು ಬರೆದಿರುತ್ತಾರೆ. ದೂರನ್ನು ನೀಡಿದ ಸಮಯ ನನಗೆ ನೆನಪಿಲ್ಲ. ಆರೋಪಿತರ ಹೆಸರು ಮತ್ತು ವಿಳಾಸ ನನಗೆ ತಿಳಿದಿರುವುದಿಲ್ಲ. ಪೊಲೀಸರು ಆರೋಪಿತರನ್ನು ನನಗೆ ತೋರಿಸಿರುತ್ತಾರೆ, ಆದರೆ ಅವರನ್ನು ಗುರುತಿಸಲು ಮತ್ತು ಅವರ ಹೆಸರು, ವಿಳಾಸ ನನಗೆ ತಿಳಿದಿರುವುದಿಲ್ಲ.

**<u>ಮರುವಿಚಾರಣೆಃ</u>** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**